ಆ) 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮೆ ನಷ್ಟ ಪರಿಹಾರ ಹಾಗೂ 2003ರ ಮುಂಗಾರು ಹಂಗಾಮಿನ ದೀರ್ಘಾವಧಿ ಬೆಳೆಯಾದ ಹತ್ತಿ ಬೆಳೆಯ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಲು ದಿನಾಂಕ 03/01/2005ರಂದು ವಿಮಾ ಸಂಸ್ಥೆಯು ಕೋರಿದೆ. ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. 2003ರ ಮುಂಗಾರು ಹಂಗಾಮಿನಲ್ಲಿ ತನಿಖಾ ಸಮಯದಲ್ಲಿ ಬ್ಯಾಂಕುಗಳು 9154 ರೈತರ ದಾಖಲಾತಿಗಳನ್ನು ಒದಗಿಸದ ಕಾರಣ ಇವರ ಬೆಳೆ ನಷ್ಟ ಪರಿಹಾರವನ್ನು ತಡೆಹಿಡಿಯಲಾಗಿದೆ.

ಇ) 2003ರ ಮುಂಗಾರು ಹಂಗಾಮಿನಲ್ಲಿ 9154 ರೈತರ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸುವುದು ಸುಮಾರು 5 ತಿಂಗಳು ತಡವಾಗಿರುತ್ತದೆ.

ಈ) 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಹಾಗೂ 2003ರ ಮುಂಗಾರು ಹಂಗಾಮಿನಲ್ಲಿ ಹತ್ತಿ ಬೆಳೆಯ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಆರ್ಥಿಕ ಇಲಾಖೆಯ ಒಪ್ಪಿಗೆ ದೊರಕಿದ ತಕ್ಷಣ ಹಣವನ್ನು ಬಿಡುಗಡೆ ಮಾಡಲಾಗುವುದು.

ಉ) 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಹಾಗೂ 2003ರ ಮುಂಗಾರು ಹಂಗಾಮಿನಲ್ಲಿ ಹತ್ತಿ ಬೆಳೆಯ ಬೆಳೆ ವಿಮಾ ನಷ್ಟ ಪರಿಹಾರವನ್ನು ಶೀಘ್ರದಲ್ಲೇ ಇತ್ಯರ್ಥಪಡಿಸಲಾಗುವುದು. 2003ರ ಮುಂಗಾರು ಹಂಗಾಮಿನಲ್ಲಿ 9154 ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ತನಿಖೆ ಪೂರ್ಣಗೊಳಿಸಿ ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಲು ಕೋರಿದ ತಕ್ಷಣ ಹಣವನ್ನು ಬಿಡುಗಡೆ ಮಾಡಲು ಇವರ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

1500(1772) ಶ್ರೀ ಶಿವಾನಂದ ಎಸ್.ಪಾಟೀಲ್(ಬಸವನಬಾಗೇವಾಡಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರು ಬಾಕಿ ಉಳಿಸಿಕೊಂಡಿರುವ ಸುಸ್ತಿ ಬಡ್ಡಿಯ ಮೊತ್ತ ಎಷ್ಟು?

ಆ) ಸರ್ಕಾರ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿರುವುದೆ:

ಇ) ಹಾಗಿದ್ದಲ್ಲಿ, ಮನ್ನಾ ಮಾಡಲಾಗಿರುವ ಮೊತ್ತ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಈ) ಸುಸ್ತಿ ಬಡ್ಡಿಯನ್ನು ಮನ್ನಾ ಮಾಡದೇ ಇದ್ದಲ್ಲಿ, ಸರ್ಕಾರ ಮನ್ನಾ ಮಾಡುವ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಉ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ರೈತರ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ದಿ:31.03.2004ಕ್ಕೆ ರೈತರು ಬಾಕಿ ಉಳಿಸಿಕೊಂಡಿರುವ ಅಂದಾಜು ಸುಸ್ತಿ ಬಡ್ಡಿ ಮೊತ್ತವು ಸುಮಾರು ರೂ.718.40 ಕೋಟಿಗಳಾಗಿರುತ್ತದೆ.

ಆ) ಅಲ್ಪಾವಧಿ ಬೆಳೆ ಸಾಲಗಳ ಮೇಲೆ ಸುಸ್ತಿ ಬಡ್ಡಿ ವಿಧಿಸಬಾರದೆಂದು ಸರ್ಕಾರವು ಸೂಚನೆ ನೀಡಿದ್ದು ಅದರಂತೆ ಸಹಕಾರ ಪತ್ತಿನ ಸಂಘಗಳು ಬೆಳೆ ಸಾಲಗಳ ಮೇಲೆ ಸುಸ್ತಿಬಡ್ಡಿ ವಿಧಿಸುತ್ತಿಲ್ಲ.

ಈ) ಮತ್ತು ಉ) ಈ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.